ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

ಸಂಖ್ಯೆ: ವಾಇ : ಸುಮಪ : ಪ ಪ್ರ : 2014–15 : ಅಕ್ಟೋಬರ್ 2 , 2014

## ದಸರಾ : ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ

ಬೆಂಗಳೂರು, ಅಕ್ಟೋಬರ್ 2 :

ನಾಡ ಹಬ್ಬ ದಸರಾ ಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಶುಭ ಕೋರಿದ್ದಾರೆ.

ಹತ್ತು–ದಿನಗಳ ಸಡಗರದ ಸಂಭ್ರಮದ ದಸರಾ ಹಬ್ಬದಲ್ಲಿ ಪ್ರತಿ ದಿನವೂ ಒಂದು ವಿಶೇಷವೇ. ಅದರಲ್ಲೂ ಆಯುಧ ಪೂಜೆ ಮತ್ತು ವಿಜಯ ದಶಮಿ ವಿಶೇಷತೆಯಲ್ಲಿಯೇ ವಿಶೇಷತೆಯನ್ನು ಪಡೆದು ಕೊಂಡಿದೆ. ಸ್ವಚ್ಛತಾ ಪರಿಕಲ್ಪನೆಯ ಆಯುಧ ಪೂಜೆ ಹಾಗೂ *ದುಷ್ಟ ಶಿಕ್ಷಣ ಮತ್ತು ಶಿಷ್ಟ ರಕ್ಷಣ* ಎಂಬುದರ ಪ್ರತೀಕವಾದ ವಿಜಯ ದಶಮಿ ನಮ್ಮ ಜೀವನದಲ್ಲಿ ಹೊಸ ಹುರುಪು ಮೂಡಿಸಿ, ಹೊಸ ಚಿಂತನೆಯನ್ನು ಪಸರಿಸಿ, ನಮ್ಮೆಲ್ಲರನ್ನೂ ಹೊಸ ಬದುಕಿನತ್ತ ಕೊಂಡೊಯ್ಯಲು ಪ್ರೇರಣೆ ನೀಡಲಿ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ಹಾರೈಸಿದ್ದಾರೆ.

**********

ಡಿ ಪಿ ಎಂ